ಬೆಂಗಳೂರು ನಗರದಲ್ಲಿರುವ ಕನ್ನಡ ಮಾಧ್ಯಮ ಶಾಲೆಗಳು

1359(409); ಶ್ರೀ ಗೋಪಾಲಯ್ಯ ಕೆ

ಅ) ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಮಾಧ್ಯಮ ಶಾಲೆಗಳೆಷ್ಟು?

ಆ) ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ) 2013–14 ಹಾಗೂ 2014–15ನೇ ಸಾಲಿನಲ್ಲಿ ಬೆಂಗಳೂರಿನಲ್ಲಿ ಹೊಸದಾಗಿ ಎಷ್ಟು ಕನ್ನಡ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಲಾಗಿದೆ?

ಈ) 2015–16ನೇ ಸಾಲಿನಲ್ಲಿ ಕೋರಿ ಬಂದಿರತಕ್ಕ ಅರ್ಜಿಗಳೆಷ್ಟು?

ಉ) ಕನ್ನಡ ಮಾಧ್ಯಮ ಶಾಲೆಗಳನ್ನು ಆರಂಭಿಸುವ ಸಂಸ್ಥೆಗಳಿಗೆ ಸರ್ಕಾರ ವಿಶೇಷವಾಗಿ ಸವಲತ್ತುಗಳನ್ನು ನೀಡುತ್ತಿದೆಯೇ? [ವಿವರಗಳನ್ನು ನೀಡುವುದು]

ಊ) 2015–16ರಲ್ಲಿ ಹೊಸದಾಗಿ ಆರಂಭಿಸುವವರಿಗೆ ಕೆಲವು ನಿಬಂಧನೆಗಳಿಗೆ ವಿನಾಯಿತಿ ನೀಡಿ ನಿಯಮಗಳನ್ನು ಸರಳೀಕರಣಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) **ಸಂಖ್ಯೆ:3,542**

ಆ) ಸಂಖ್ಯೆ ಒಟ್ಟು: 5,11,405 ವಿದ್ಯಾರ್ಥಿಗಳು.

ಇ)

	ಕಿರಿಯ	ಹಿರಿಯ	ಪ್ರೌಢ	ಒಟ್ಟು
2013–14	155	30	0	185
2014–15	176	19	1	196
2015–16	238	88	0	326

ಉ) 1986–87ನೇ ಸಾಲಿನಿಂದ 1994–95ನೇ ಸಾಲಿನವರೆಗೆ ಪ್ರಾರಂಭಗೊಂಡ ಖಾಸಗಿ ಅನುದಾನರಹಿತ ಕನ್ನಡ ಮಾಧ್ಯಮ ಪ್ರಾಥಮಿಕ/ಪ್ರೌಢ ಶಾಲೆಗಳಿಗೆ ಸಹಾಯಾನುದಾನವನ್ನು ನೀಡಲಾಗುತ್ತಿದೆ.

ಊ) ಇಲ್ಲಾ

ಕುಡಿಯುವ ನೀರಿನಲ್ಲಿ ಆರ್ಸೆನಿಕ ಅಂಶ

1362(1690); ಶ್ರೀ ಗುರು ಪಾಟೀಲ ಶಿರವಾಳ (ಶಹಾಪುರ)

ಅ) ಶಹಾಪುರ ಮತ ಕ್ಷೇತ್ರದ ಕಿರದಹಳ್ಳಿ ತಾಂಡಾ, ಕಿರದಳ್ಳಿ, ಮೂಲಗತ್ತಿ, ಜೈನಾಪೂರ ಕರಡಕಲ್, ಪರಸನಹಳ್ಳಿ, ಮಾಳಳ್ಳಿ, ತಿಪನಟಗಿ, ಹಗ್ಗಣದೊಡ್ಡಿ, ಗೂಡರಿಹಾಳ, ಗ್ರಾಮಗಳ ನೀರಿನಲ್ಲಿ ಆರ್ಸೆನಿಕ್ ಅಂಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮಗಳಿಗೆ ಶುದ್ಧ ನೀರನ್ನು ಕಲ್ಪಿಸಲು ಸರ್ಕಾರ ಹಾಕಿಕೊಂಡ ಯೋಜನೆಗಳು ಏನು;

ಇ) ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಶೀಘ್ರವಾಗಿ ಅಳವಡಿಸಲು ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳಲಾಗುವುದೆ?